ಮೀಟಿದಂತಾಗುತ್ತಿತ್ತು. ಆಯಸ್ಸು ತೀರುವ ಮೊದಲೇ ಕಾಣೆಯಾದ ಬೊಮ್ಮಜ್ಜ, 14 ಮಕ್ಕಳ ತಾಯಿ ಆತನ ಹೆಂಡತಿ ಬೊಮ್ಮಿ, ಆತ ಕಾಣೆಯಾಗಿದ್ದಕ್ಕೆ ಆಕೆ ಹೆಚ್ಚು ಕೊರಗಲೂ ಇಲ್ಲವೆಂದರೆ...? ನಿರುಮ್ಮಳ ಕಾಣುತ್ತಿದ್ದಳೆಂದರೆ...! ಸುಮ್ಮನೆ ಬೇಡದ ಹುಳವನ್ನು ತಲೆಯಲ್ಲಿ ಬಿಟ್ಟುಕೊಂಡರೆ ಹಾಳಾಗುವುದು ನನ್ನದೇ ತಲೆ ಎನಿಸಿ ಮಲಗುವುದಕ್ಕೆ ಎದ್ದೆ. ಆದರೆ ಎಲ್ಲಿ ಬರಬೇಕು ನಿದ್ದೆ? 'ಕಳೆದೋದವರನ್ನ ಯಾರೂ ಹುಡುಕಿದ್ವಿಲ್ಯ?' ಲೀಲತ್ತಿಗೆಯನ್ನು ಕೇಳಿದೆ. ನನ್ನಿಂದ ಕೊಂಚ ದೂರದಲ್ಲಿ ಹಾಸಿಗೆ ಹಾಸಿಕೊಳ್ಳುತ್ತಿದ್ದವಳು ಕೇಜಿಯಣ್ಣನ ಮುಖ ನೋಡಿದಳು. 'ಹುಡುಕದ್ದೆ ಹೋಗಿರ್ತ್ವಿಲ್ಲೆ. ಸಿಕ್ಕಿದ್ವಿಲ್ಲೆ, ಅಷ್ಟೆ. ಅದ್ನ ಬಿಡು ಕೂಸೆ. ನಾಳೆ ಬಂಕಿಕೊಡ್ಲಿನ ಬದಿಗೆ ಹೋಪದಿದ್ದು. ಹಿಂದೆ ಅಲ್ಲೊಂದು ಕೋಟೆ ಇದ್ದಿತ್ತು. ಈಗೂ ಇದ್ದು ಅದರ ಶೇಷ. ಬನವಾಸಿಯ ಅರಸರು ಅವರ ಸಂಪತ್ತನ್ನೆಲ್ಲಾ ಇದೇ ಬಂಕಿಕೋಟೆಲ್ಲಿ ಇಡತಿದ್ವಡ. ಕೋಟೆಗೆ ಬಂದ ಸೈನಿಕರು ಕುದುರೆಜಡ್ಡಿ ಕಾನಿನ ಹತ್ರೆ ಹರೀತಲಿ ಹೊಳೆ... ಅಲ್ಲೇ ದಂಡೆ ಮೇಲೆ ಬಿಡಾರ ಹಾಕತಿದ್ವಡ. ಸೇನೆಯ ಬಿಡದಿ ಇದ್ದಿದ್ದಕ್ಕೇ ಆ ಜಾಗಕ್ಕೆ ಕುದುರೆಜಡ್ಡಿ ಅನ್ನ ಹೆಸರು ನಿಂತಿದ್ದು. ನಾಳೆ ನೋಡಲಕ್ಕು, ಈಗ ನಿದ್ದೆ ಮಾಡು' ಎನ್ನುತ್ತಾ ದೀಪ ಆರಿಸಿದ ಕೇಜಿಯಣ್ಣ. ಅಂದಿನ ಕನಸಂತೂ... ದೇವರಿಗೇ ಪ್ರೀತಿ!

* * *

ಬೆಳಗ್ಗೆ ಕೇಜಿಯಣ್ಣನದ್ದೇ ಜೀಪಿನಲ್ಲಿ ಹೊರಟಿದ್ದೆವು. ನನ್ನ ಪಕ್ಕದಲ್ಲಿ ಕೇಜಿಯಣ್ಣನ ಮಗಳು ಮತ್ತು ನಗೆಮೊಗದ ಲಲಿತೆ. ಮರಗಳ ದೊಡ್ಡ ಬೇರುಗಳೆಲ್ಲಾ ಹಾದುಹೋದಂಥ ಮಣ್ಣು-ದೂಳು ಮಿಶ್ರಿತ ದಾರಿಯದು. ಹಾಗಂತ 4X4 ಥರದ ಗಾಡಿಗಳು ಸರಾಗ ಹೋಗುತ್ತಿದ್ದವು. ಮಳೆಗಾಲದಲ್ಲಿ ಚನ್ನಾಗಿ ರಾಡಿಯೇಳುವುದಕ್ಕೆ ಅನುಕೂಲವಾಗುವಂತೆ ಈಗ ಸರಿಯಾಗಿ ದೂಳೆಬ್ಬಿಸುತ್ತಿದ್ದ ದಾರಿಯಲ್ಲಿ, ಟಾಪಿಲ್ಲದ ಜೀಪಿನಲ್ಲಿ ಉದ್ದಕ್ಕೂ ಕಂಬಿ ಹಿಡಿದು ನಿಂತೇ ಇದ್ದಳು ಲಲಿತೆ. ಬಾಯಿಬಿಟ್ಟರೆ ಗಂಟಲಿಗೆಲ್ಲಾ ದೂಳು ಅಡರುವಂಥ ದಾರಿಯಲ್ಲಿ ಇವಳದ್ದು ಮಾತೂಮಾತು! ಕುದುರೆ ಜಡ್ಡಿಯ ಹೊಳೆಯಲ್ಲಿ ಬಿರುಬೇಸಿಗೆಯಾದರೂ ಇನ್ನೂ ನೀರಿತ್ತು. ಅಗಲವಾದ ನದೀತಟವನ್ನು ತೋರಿಸುತ್ತಾ, 'ನೋಡು ತಂಗಿ, ಇದೆಲ್ಲಾ ಸೈನಿಕರ



ಕುದುರೆ ಮೇಯುವ ಜಾಗಾಗಿತ್ತು. ಹಂಗಾಗೇ ಇದು ಕುದುರೆಜಡ್ಡಿ. ಹಿಂಗೇ ಎಡಬದೀಗೆ ಹೊಳೆಸಾಲಿಡಿದು ಹೋದರೆ ಬಂಕಿಕೊಡ್ಲು. ಆ ಕೊಡ್ಲು (ಪ್ರಪಾತ) ಮೇಲೆ ಕೋಟೆ ಕಟ್ಟಿದ್ದ' ಎಂದು ಕೇಜಿಯಣ್ಣ ವಿವರಿಸುತ್ತಿದ್ದ. 'ಅಕ್ತಂಗಿ ಗುಂಡಿ ಯಾವ ದಿಕ್ಕು?' ಮೆಲ್ಲಗೆ ಕೇಳಿದೆ. ಕೇಜಿಯಣ್ಣ ಮಾತಾಡಲಿಲ್ಲ ಅಥವಾ ಕೇಳಿಸಲಿಲ್ಲ... ಬಹುಶಃ. ಬಲಗಡೆಯ ದಿಕ್ಕೊಂದನ್ನು ಕಣ್ಣಲ್ಲೆ ತೋರಿದಳು ಲಲಿತೆ!

ಬೆಳಗ್ಗೆ ಎಂಟಕ್ಕೆ ಮನೆ ಬಿಟ್ಟಿದ್ದಕ್ಕೆ ಒಂದು ಕಾರಣವೂ ಇತ್ತು. ಕುದ್ರೆಜಡ್ಡಿ ಹೊಳೆಯಲ್ಲಿ ನೀರಾಟವಾಡಿ, ಬಿಸಿಲೇರುತ್ತಿದ್ದಂತೆ ಬಂಕಿಕೊಡ್ಲಿನತ್ತ ಪ್ರಯಾಣಿಸುವುದು ನಮ್ಮ ಉದ್ದೇಶವಾಗಿತ್ತು. ಇನ್ನೀಗ ನೀರಿಗಿಳಿಯಬೇಡವೇ? ಹದವಾದ ಎದೆಮಟ್ಟದ ನೀರಲ್ಲೇ ಮೂವರೂ ಇಳಿದಿದ್ದೆವು. ದಡದಲ್ಲೇ ಕುಳಿತಿದ್ದ ಕೇಜಿಯಣ್ಣ, ಕಳೆದ ಬಾರಿ ಹಾವಿನ ಅಧ್ಯಯನಕ್ಕೆ ಬಂದವರ ಕಥೆ ಆರಂಭಿಸಿದ. ಆ ಕಥೆಯಾದ್ಮೇಲೆ ಇನ್ನೊಂದು, ಅದಾದಮೇಲೆ ಮತ್ತೊಂದು- ಗಂಟೆ 10 ದಾಟಿದ್ದು ತಿಳಿಯಲೇ ಇಲ್ಲ. ಬಿಸಿಲು ಚುರುಕಾಗಿದ್ದರಿಂದ ಎಲ್ಲರಿಗೂ ಎಚ್ಚರವಾಯಿತು. ಲಗುಬಗೆಯಿಂದ ಮೇಲೆದ್ದು ಹತ್ತಿರದ ಪೊದೆಯತ್ತ ಮೂವರೂ ನಡೆದೆವು. ನಮಗಾಗಿ ಒಂದಿಷ್ಟು ಬಾಯಾಡುವುದಕ್ಕೆ